ಶ್ರೀ ಕೆ. ಶ್ರೀರಾಮುಲು.—ನಾನು ಈಗತಾನೇ ಹೇಳಿದೆ. ನಾನು ಈ ಅಧಿಕಾರಕ್ಕೆ ಬಂದ ಮೇಲೆ 8-9 ತಿಂಗಳಲ್ಲಿ ಸಾಕಷ್ಟು ನಷ್ಟವನ್ನು ಕಡಿಮೆ ಮಾಡಿದ್ದೇನೆ. ಇನ್ನೂ ಕೂಡ ಈ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ, ನಾನು ಇದರಲ್ಲಿ ನಡೆದಿರುವ ನಷ್ಟವನ್ನು ಹೇಳಿದ್ದೇನೆ.

ಶ್ರೀ ಎಂ. ಸಿದ್ದಮಾದಯ್ಯ.—ಒಂದು ಕೆ.ಜಿ.ಗೆ 36 ರಿಂದ 43 ರೂ. ವರೆಗೆ ರೈತರಿಗೆ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ತಾವು ಈರೀತಿ ರಿಪೋರ್ಟ್ ಕೊಡುವುದನ್ನು ಕೈಬಿಡಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ಇದರಿಂದ ನಮ್ಮ ಸೊಸೈಟಿಯಲ್ಲಿ ಕೂಡ ಲಾಸ್ ಆಗಿದೆ. ಸೊಸೈಟಿಗೂ, ಇದಕ್ಕೂ ಸಂಬಂಧವಿಲ್ಲ. ಸೊಸೈಟಿಯವರು ಒಂದು ರೇಟ್ ಫಿಕ್ಸ್ ಮಾಡಿದರೆ ಅವರು ಅದರಂತೆ ಮಾರುತ್ತಾರೆ, ಇಲ್ಲದಿದ್ದರೆ ಹಾಗೆಯೇ ಇಟ್ಟಿರುತ್ತಾರೆ.

ಶ್ರೀ ಕೆ. ಶ್ರೀರಾಮುಲು.—ಮಾನ್ಯ ಸದಸ್ಯರು ಏನು ತಿಳಿದುಕೊಂಡು ಈರೀತಿ ಕೇಳುತ್ತಿದ್ದಾರೋ ನನಗಂತೂ ಗೊತ್ತಾಗುತ್ತಿಲ್ಲ. ಲೆಕ್ಕದಲ್ಲಿ ತೋರಿಸಿರುವ ಪ್ರಕಾರ ಪ್ರತಿಯೊಬ್ಬ ರೈತನಿಗೂ 46 ರೂಪಾಯಿಗಳು ಸೇರಿರಬೇಕು. ಈರೀತಿ ಸೇರಿದ್ದರೆ ಅವರಿಗೆ ಲಾಸ್ ಆಗುತ್ತಿರಲಿಲ್ಲ. ಇನ್ನೊಂದು ಕಡೆ ಫೆಡರೇಷನ್‌ನವರು 248 ರೂ. ನಂತೆ ತೆಗೆದುಕೊಂಡು 271 ರೂಪಾಯಿಯಂತೆ ಮಾರಾಟ ಮಾಡಿದ್ದಾರೆ. ಇಲ್ಲಿ ಬರುವ 23 ರೂಪಾಯಿಗಳು ಏನಾಯಿತು ? ತಾವು ಆ ಸಂಸ್ಥೆಯ ಡೈರೆಕ್ಟರ್ ಆಗಿದ್ದೀರಿ ಮತ್ತು ಇಲ್ಲಿ ಶಾಸಕರೂ ಆಗಿದ್ದೀರಿ ಅಂದರೆ ಎರಡೂ ಕಡೆ ಜವಾಬ್ದಾರಿ ಸ್ಥಾನದಲ್ಲಿದ್ದೀರಿ. ತಾವೇ ಆ ಬ್ಯಾಲೆನ್ಸ್ ಪೀಚನ್ನು ಯಾರಿಗಾದರೂ ತೋರಿಸಿ ಒಪ್ಪಿಸಿ.

Promotion of Lecturers as Readers in Private Colleges

476. SRI C. V. VENKATARAYAPPA (Chickaballapur).—Will the Minister for University & Wakfs be pleased to state :—

(*a*) the basis on which Lecturers are promoted as Readers in private Colleges (Arts and Science) ;

(*b*) whether the period of service in the same Institution if counted or whether period of service put in, in different Institutions is counted for purposes of promotion ?

SRI S. M. YAHYA (Minister for University Education and Wakfs).—

(*a*) Seniority-cum-merit.

(*b*) The period of service rendered in different institutions under the same management is taken into account for purpose of promotion.

SRI C. V. VENKATARAYAPPA.—In answer to question (a) it is stated the basis for promotion is seniority cum merit. In the private colleges confidential reports are not maintained. How do you judge the merit ?

† SRI S. M. YAHYA.—The well established promotion pattern is 1:2:3:12. For an unit of 16 teachers there shall be one professor, three Readers and 12 Lecturers. On that basis it can be worked out.

SRI C. V. VENKATARAYAPPA.—For promotion you have said service cummerit. How do you judge the merit of a lecturer ?

SRI S. M. YAHYA.—In the private colleges it is for the management to decide basing on experience and other factors.

SRI C.V. VENKATARAYAPPA.--May I take that services rendered by a lecturer in different managements will not be taken into consideration while promoting a person ?

SRI S. M. YAHYA.—Certainly not.

Murder in Harapanahalli Taluk

534 SRI KAGODU THIMMAPPA (Sagar).—Will the Chief Minister be pleased to state :—

(*a*) whether it is a fact that a girl from Ingalgundi village and an advocate from Lingapur village in Harapanahalli Taluk been murdered ;

(*b*) if so, whether the alleged murderers have been arrested ;

(*c*) if not, the special efforts made to arrest the alleged murderers ?

SRI N. HUTCHMASTI GOWDA (Minister for Revenue) [on behalf of SRI D. DEVARAJ URS (Cheif Minister)] —

(*a*) Yes

(*b*) Yes

(*c*) Does not arise in view of reply to clause (b).

ಶ್ರೀ ಕಾಗೋಡು ತಿಮ್ಮಪ್ಪ —ಸ್ವಾಮಿ ಈ ಎರಡು ಕೊಲೆಗಳು ಯಾವ ಯಾವ ತಾರೀಖಿನ ಆಗಿವೆ? ಮತ್ತು ಎರಡೂ ಕೊಲೆಗಳಿಗೆ ಸಂಬಂಧಪಟ್ಟಂತೆ ಆರೋಪಿಗಳು ಇದ್ದಾರೆಯೇ?.

† ಶ್ರೀ ಎನ್. ಹುಚ್ಚಮಾಸ್ತಿಗೌಡ,—ಮೊದಲನೆಯದು 24ನೇ ಮಾರ್ಚ್ 1977ರಲ್ಲಿ ರತ್ನವ್ವ ಎಂಬಾಕೆ ಕೊಲೆಯಾಗಿರತಕ್ಕಂಥಾದ್ದು. ಇನ್ನೊಂದು 27ನೇ ಮಾರ್ಚ್ 1977ರಲ್ಲಿ ನಡೆದಿರತಕ್ಕಂಥಾದ್ದು ಆಗಿರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಎರಡು ಕೇಸ್‌ಗಳಿಗೆ ಸಂಬಂಧಪಟ್ಟಂತೆ ಆರೋಪಿಗಳನ್ನು ದಸ್ತಗಿರಿ ಯಾವಾಗ ಮಾಡಿದಿರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲನೆಯ ಕೇಸಿಗೆ ಸಂಬಂಧಪಟ್ಟಂತೆ ಆರೋಪಿಗಳನ್ನು 2ನೇ ಏಪ್ರಿಲ್ 1977 ರಲ್ಲೂ, ಎರಡನೆಯದಕ್ಕೆ ಸಂಬಂಧ ಪಟ್ಟಂತೆ 2ನೇ ಏಪ್ರಿಲ್ 1977 ರಲ್ಲಿಯೇ ದಸ್ತಗಿರಿಮಾಡಲ್ಪಟ್ಟಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕೊಲೆಯಾದ ತಕ್ಷಣ ಹೆಚ್ಚು ಕಡಿಮೆ ತಿಳಿದರೂ ತನಿಕೆ ಕಾರ್ಯಕ್ರಮದಲ್ಲಿ ವಿಳಂಬವಾಗುವುದಕ್ಕೆ ಕಾರಣವೇನು?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪೋಲೀಸ್ ಸ್ಟೇಷನ್‌ಗೆ ಅರ್ಜಿಬಂದಕೂಡಲೇ ಇನ್‌ವೆಸ್ಟಿಗೇಷನ್ ಕಾರ್ಯಕ್ರಮ ಕೈಗೊಂಡಿದ್ದಾರೆ. ಆರೋಪಿಗಳನ್ನು ಪತ್ತೆಮಾಡುವ ಕಾರ್ಯದಲ್ಲಿ ನಿಧಾನವಾಗಿರಬಹುದು. ಆದ್ದರಿಂದ ಆರೋಪಿಗಳನ್ನು ದಸ್ತಗಿರಿ ಮಾಡುವುದರಲ್ಲಿಯೂ ವಿಳಂಬವಾಗಿರುತ್ತದೆ.